**ವ್ಯಾಖ್ಯಾನ**

# <u>ಅಲ್ಲಿ ವನಗಳುಂಟು ಅಪ್ರಾಕೃತವಾದ</u>

ಈ ಉಗಾಭೋಗದ ಚಿಂತನೆ:

**ಅಲ್ಲಿ ವನಗಳುಂಟು ಅಪ್ರಾಕೃತವಾದ**

**ಫಲ ಪುಷ್ಪಗಳಿಂದೊಪ್ಪುತ್ತಲಿಹುದು**

**ಪಕ್ಷಿಜಾತಿಗಳುಂಟು ಅತಿವಿಲಕ್ಷಣವಾದ**

**ಕಿಲಕಿಲ ಶಬ್ದವು ರಂಜಿಸುವ *ನುಡಿಗಳು**

**ಮುಕುತರು ಬಂದು ಜಲಕ್ರೀಡೆಗಳ ಮಾಡಿ ಸುಖಿಪರು**

**ಇಂಥ ಸುಖ ಬೇಕಾದರೆ ನೀಚವೃತ್ತಿಯ ಬಿಟ್ಟು**

**ಪರಲೋಕ ಸುಖವೀವ ಪುರಂದರ ವಿಠಲನ ಭಜಿಸು ಜೀವ.**

ತಾತ್ವಿಕ ಪ್ರಪಂಚದಲ್ಲಿ ಅನೇಕ ದರ್ಶನಗಳು(ಮತ)ಳಿವೆ.ಅವರೆಲ್ಲ ಮೋಕ್ಷದ ಬಗ್ಗೆ ವಿವಿಧ ಅಭಿಪ್ರಾಯ ಉಳ್ಳವರಾಗಿದ್ದಾರೆ.

ಉದಾಹರಣೆಗೆ ಒಂದೆರಡು ನೋಡುವುದಾದರೆ,

***ಜೈನಮತದ ಮೋಕ್ಷ**
**"ನಿರಂತರ ಊರ್ಧ್ವಗಮನವೇ ಮೋಕ್ಷ"**

ಅವರ ಪ್ರಕಾರ ಜೀವ ಒಂದು ಪಕ್ಷಿ ಇದ್ದಂತೆ. ಈ ಪ್ರಾಕೃತ ಶರೀರವೆಂಬ ಪಂಜರದಲ್ಲಿ ಬಂಧಿತನಾಗಿದ್ದಾನೆ. ಕೇವಲ (ಶುದ್ಧ)ಜ್ಞಾನ ಪಡೆದಾಗ ಈ ಶರೀರದಿಂದ ಬಿಡುಗಡೆ ಹೊಂದಿ ಮೇಲೆ ಸಾಗುತ್ತಾನೆ. ಹೀಗೆ ನಿರಂತರವಾಗಿ ಮೇಲೆ ಸಾಗುವುದೇ ಮುಕ್ತಿ.

ಇದು ಎನ್ನುವುದು ಎಷ್ಟು ಸರಿ,

ಮೇಲೆ ಹೊರಟ ಜೀವನಿಗೆ ಸುಖವೇ ಇಲ್ಲ.

ಹೀಗೆ ಸುಖವಿಲ್ಲದ ಮೋಕ್ಷಕ್ಕಾಗಿ ಈ ಸಂಸಾರದ ಸುಖ ತ್ಯಾಗ ಮಾಡಿ ಸಾಧನೆ ಮಾಡುವುದು ಎಷ್ಟು ಸಮಂಜಸ. ಯಾರು ಬಯಸುತ್ತಾರೆ ಇಂಥಾ ಮೋಕ್ಷ ಅಲ್ಲವೆ?

**ಇನ್ನು ಮಾಯಾವಾದಿಗಳ ಮೋಕ್ಷ**

ಜೀವ ಅಜ್ಞಾನ ಕಳೆದುಕೊಂಡನೆಂದರೆ, ನಿರ್ಗುಣ ಬ್ರಹ್ಮನಲ್ಲಿ ಐಕ್ಯ ಹೊಂದುತ್ತಾನೆ. ಇದು ಮೋಕ್ಷ. ಇಲ್ಲಿಯೂ ಅಷ್ಟೇ ಯಾವುದೇ ಆನಂದಾದಿ ಗುಣಗಳೇ ಇಲ್ಲದವರಾಗುವುದು ಅದೆಂಥ ಪುರುಷಾರ್ಥ, ತಿಳುವಳಿಕೆಯುಳ್ಳವರ್ಯಾರಾದರೂ ಇದನ್ನು ಬಯಸುವರೆ ?

**ಇನ್ನು ಬೌದ್ಧಮತದ ಮೋಕ್ಷ**

ಜೀವ ಸಂಪೂರ್ಣ ಶೂನ್ಯನಾಗುವು ಅಂದರೆ ಇಲ್ಲದಂತಾಗುವುದು ಮೋಕ್ಷ.

ಈಗಿದ್ದ ಸುಖವೇ ಕಡಿಮೆಯಾಗುತ್ತದೆ ಎಂದರೆ ಅದನ್ನು ಬಿಡಲು ಒಪ್ಪದ ಜೀವರು ಇನ್ನು ಅಸ್ತಿತ್ವವನೇ ಕಳೆದುಕೊಳ್ಳುವುದಾದರೆ ಮೋಕ್ಷ ಬೇಡ ಇಲ್ಲೇ ಚನ್ನಾಗಿದೆ ಅನ್ನಲಾರರೇ?

**ಆದರೆ, ಮಧ್ವರು ಹೇಳಿದ ಮೋಕ್ಷ**

ಮಧ್ವರು ಹೇಳಿದ ಮೋಕ್ಷ ಇದು ಶಾಸ್ತ್ರ ಪ್ರತಿಪಾದ್ಯವಾದದ್ದು. ವೇದಾದಿಗಳಲ್ಲಿ ವರ್ಣಿತವಾದದ್ದು.

ಮೋಕ್ಷದಲ್ಲಿ, ಈ ಲೋಕದಲ್ಲಿ ಯಾವ ಸುಖಕ್ಕಾಗಿ (ಅದೂ ದು:ಖ ಮಿಶ್ರಿತವಾದದ್ದು) ಜೀವರು ಹಂಬಲಿಸಿ ಹೈರಾಣಾಗುತ್ತಾರೋ ಅಂತಹ ಸುಖ ನಿರಂತರ ಯಾವುದೇ ಶ್ರಮವಿಲ್ಲದೇ ಅನಾಯಾಸವಾಗಿ, ದು:ಖದ ಸ್ಪರ್ಷವೂ ಇಲ್ಲದೇ ಸಿಗುತ್ತವೆ, ಮತ್ತು ನಿರಂತರವಾಗಿ ಅನಂದದ ಭೋಗ ವಿರುವ ಲೋಕ ಸಿಗುತ್ತದೆ ಎಂದರೆ ಯಾರು ತಾನೇ ಅದಕ್ಕಾಗಿ ಹಂಬಲಿಸಲಾರರು ಹೇಳಿ.

**ಅದನ್ನೇ ಶ್ರೀ ಪುರಂದರ ದಾಸರು ಈ ಉಗಾಭೋಗದಲ್ಲಿ,**

ಅಲ್ಲಿಯೂ ಇಲ್ಲಿಯಂತೆಯೇ ಸುಖಸಾಧನಗಳಾದ ವನಗಳುಂಟು, ಅಪ್ರಾಕೃತ ಫಲ ಪುಷ್ಪಗಳು ಎಂದರೆ, ಬಾಡದ ಹೂಗಳು, ಹಾಳಾಗದ ಹಣ್ಣುಗಳು ಯಥೇಚ್ಛವಾಗಿ(ಬಯಸಿದಷ್ಟು ಬಯಸಿದ ನಂತರ ಅಲ್ಲ) ಇನ್ನು ಆಶೆಪಟ್ಟಿದ್ದೇವೆ ಎನ್ನುವಷ್ಟರಲ್ಲಿ ಬಯಸಿದ್ದೆಲ್ಲ ಬಂದೊದಗುತ್ತವೆ.

ಇಂಥಾ ಲೋಕ ದೊರೆಯುವುದು ಹರಿಯ ಪ್ರಸಾದದಿಂದ.

**ಅದಕ್ಕಾಗಿ**

ಭಗವದ್ಭಕ್ತರಾದವರು ದುಷ್ಕರ್ಮದಿಂದ ದೂರಿದ್ದು ಸತ್ಕರ್ಮಾಚರಣೆ ಮಾಡಿ ಉದ್ಧಾರ ಹೊಂದಲಿ ಎಂದು, ಕರುಣೆಯಿಂದ ದಾಸರು ಉಪದೇಶ ಮಾಡುತ್ತಾರೆ.

**ಉಪದೇಶದಲ್ಲಿ ಎರಡು ವಿಧ--** ಒಂದು ಕೆಟ್ಟ ಕರ್ಮದಿಂದಾಗುವ ನರಕಾದಿ ಅನರ್ಥ ಮತ್ತು ಅಲ್ಲಿ ಅನುಭವಿಸಬೇಕಾದ ದು:ಖದ ತೀವ್ರತೆಯನ್ನು ತಿಳಿಸುವ ಮೂಲಕ ಇಂಥಾ ತಪ್ಪುಗಳನ್ನು ಮಾಡದಿರಿ ಎಂದು ಎಚ್ಚರಿಸುವುದು.

ಇನ್ನೊಂದು ಸತ್ಕರ್ಮಾಚರಣೆಯಿಂದ ಬರುವ ಪುಣ್ಯ ಮತ್ತು ಅದರ ಫಲವಾದ ಇಹಪರದ ಸುಖದ ವರ್ಣನೆಯನ್ನು ಮಾಡಿ ಸತ್ಕರ್ಮಾಚರಣೆಗೆ ಪ್ರೇರಿಸುವುದು.

ಪ್ರಸ್ತುತ ಉಗಾಭೋಗದಲ್ಲಿ ಶ್ರೀ ಪುರಂದರ ದಾಸರು ಎರಡನೆಯ ವಿಧಾನವನ್ನು ಅನುಸರಿಸುತ್ತ, ಮೋಕ್ಷ ಸಾಧಕರಿಗೆ ಹರಿಭಜನೆಯಲ್ಲಿ ತೊಡಗಲು ಪ್ರೇರಿಸುತ್ತಾರೆ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ